ಢಾಕಾ ವಿಶ್ವವಿದ್ಯಾಲಯದಲ್ಲಿ 1956ರಿಂದ 1994ರವರೆಗೆ ಪ್ರಾಧ್ಯಾಪಕರಾಗಿ ಕೆಲಸ ಮಾಡಿದ ಬರ್ಹಾನುದ್ದೀನ್ ಖಾನ್ ಜಹಾಂಗೀರ್ ಲೇಖಕರಾಗಿ ಪ್ರಸಿದ್ಧರು. ಕಲಾವಿಮರ್ಶಕರಾಗಿಯೂ ಗುರುತಿಸಿಕೊಂಡಿದ್ದರು. ಪ್ರತಿಷ್ಠಿತ ಬಾಂಗ್ಲಾ ಅಕಾಡೆಮಿ ಪ್ರಶಸ್ತಿ, ಎಕುಶೇಯ್ ಪದಕಗಳು ಅವರಿಗೆ ಸಂದಿವೆ.

ದಿವಸವಾಗಬಹುದಾಗಿದ್ದ ದಿನ, ತಂದೆ ಇನ್ನೂ ಕಟ್ಟುನಿಟ್ಟಿನ ಪಾಲಕನಂತೆ ರೇಗುತ್ತ ನಿಂತಿದ್ದ. ಬೇರೆಯವರ ತಂದೆತಾಯಿಗಳು ಮಕ್ಕಳ ಸಂಕಟದ ಹೊತ್ತಲ್ಲಿ ಖಂಡಿತ ಸಮಾಧಾನ ಮಾಡುತ್ತಿದ್ದರು. ಆದರೆ ಅವನ ತಂದೆ? ಕೋಗಿಲೆಯ ಕೂಗಿಗೆ ಬೆಳಿಗ್ಗೆ ಬೇಗ ಏಳುವವನು ಹೌದು. ಆದರೆ ಬದುಕಿನಲ್ಲಿ ಸಾಧಿಸಿದ್ದು? ಅಪ್ಪನಿಂದ ಯಾಕೆ ಅವನಿಗೆ ಕಿರಿಕಿರಿಯಾಗಬಾರದು? ಅಲ್ಲಿಯತನಕದ ಶೌಕತ್‌ನ ಬದುಕಿನಲ್ಲಿ ಒಳ್ಳೆಯದು, ಕೆಟ್ಟದ್ದು, ಯಾವಾಗ ಹಗ್ಗ ಜಗ್ಗಬೇಕು ಸಡಿಲಬಿಡಬೇಕು, ಬಡತನ ಅವಮಾನ... ಎಲ್ಲವೂ ಈ ಮನುಷ್ಯನ ಕೈಯಲ್ಲೇ ಇದ್ದುದು.

ಈ ಅರಿವು ಶೌಕತ್‌ನ ಇಡೀ ಮೈಯನ್ನು ತಾತ್ಸಾರದಿಂದ ನಡುಗಿಸಿತು. ತನ್ನ ಆದರ್ಶದ ಸಣ್ಣ ತುಣುಕೂ ತಂದೆಯಲ್ಲಿ ಅಡಗಿರುವುದು ಕಾಣಿಸಲಿಲ್ಲ. ಅಸಮಾಧಾನ ಅವನನ್ನು ಘಾಸಿಗೊಳಿಸುವತನಕವೂ ಬಹುದಿನಗಳಿಂದ ಬೆಳೆಯುತ್ತ ಇತ್ತು. ತುಂಬುತ್ತಿದ್ದ ಹೇವರಿಕೆ ಇದೀಗ ತಾಳಿಕೊಳ್ಳಲಾಗದ ಹಂತ ತಲುಪಿತ್ತು. ಅವನೇನೋ ವಿದ್ಯಾವಂತ ಆಧುನಿಕ ಯುವಕನಾದ ಕಾರಣ ಮಾತುಗಳು ನಯವಾಗಿದ್ದವು. ಆದರೆ ತಂದೆಯನ್ನು ತಿರಸ್ಕಾರದಿಂದ ನೋಡುವದು ಮನೆಯ ಹೊರಗಿನವರ ಗಮನಕ್ಕೆ ಬರುವುದನ್ನು ತಡೆಯಲು ಆಗಲಿಲ್ಲ.

ತಂದೆಗೆ ಶೌಕತ್ ಮಲಗಿಲ್ಲ ಎನ್ನುವುದು ಗೊತ್ತಿತ್ತು. 'ಇವತ್ತು ನಿನ್ನ ಉದ್ಯೋಗದ ಸಂದರ್ಶನದ ಬಗ್ಗೆ ಗೊತ್ತಾಗುತ್ತದಲ್ಲ?'

'ಹೌದು'ಕಣ್ಣು ತೆರೆದು ಶೌಕತ್ ಹೇಳಿದ.

ಅದೊಂದು ಖಾಸಗಿ ಕಂಪೆನಿಯಲ್ಲಿ ಎಲ್ಲೆಂದರಲ್ಲಿ ಯಾವಾಗ ಬೇಕಾದರೂ ವರ್ಗಾವಣೆ ಸಾಧ್ಯ ಇರುವ ಸಹಾಯಕ ಹುದ್ದೆ. ತಂದೆ ತಿಳಿದಂತೆ ಅಲ್ಲಿನ ಮ್ಯಾನೇಜರ್ ಒಳ್ಳೆಯವರು, ಆದರೆ ಜೀವನಪೂರ್ತಿ ಕಹಿಯಾದ ಅನುಭವ ಅವನನ್ನು ಜಾಗ್ರತಗೊಳಿಸಿತ್ತು. ತನಗೆ ಒಂದು ಸಾಂತ್ವನ ಬೇಕಿತ್ತು. ಇದು ಶೌಕತ್‌ನಲ್ಲಿ ಸಿಟ್ಟು ತಳಮಳ ಹೆಚ್ಚಿಸಿತು.

ಅಮ್ಮ ಕೋಣೆಯೊಳಗೆ ಚಹಾ ತಿಂಡಿ ತಂದಳು. ಎದುರಿಗಿಟ್ಟು 'ಇಲ್ಲಿದೆ ತಿಂಡಿ' ಎಂದಳು.

ಶೌಕತ್ ಒಂದು ಹನಿ ಕುಡಿದು, 'ಎಂತಹ ಗಲೀಜು ಕಪ್' ಎಂದ.

ಮುಜುಗರದಲ್ಲಿ ಅಮ್ಮ, 'ಗಡಿಬಿಡಿಯಲ್ಲಿ ಕೊಳೆಯಾಯಿತು, ಇಲ್ಲಿ ಕೊಡು ಒರೆಸಿ ಕೊಡುವೆ. ಅಡುಗೆ ಮನೆಯಲ್ಲಿ ಜೇಡರಬಲೆ ಮಸಿ ತುಂಬಿದಾಗ ಕಷ್ಟ ಮಗನೆ. ಯಾವಾಗಿನಿಂದ ಇವನ್ನೆಲ್ಲ ಸ್ವಲ್ಪ ಚಂದ ಮಾಡುವ ಎಂದು ಕೇಳುತ್ತಿರುವೆ...' ಅಂದಳು.

ಶೌಕತ್ ಗಮನಿಸಲಿಲ್ಲ; 'ಸ್ವಚ್ಛ ಇಲ್ಲದಾಗ ತಿನ್ನಬೇಕು ಅನಿಸುವುದಿಲ್ಲ'

ಕಪ್ ಅನ್ನು ಸೀರೆಯಿಂದ ಒರೆಸುತ್ತ, 'ಇದೊಂದಕ್ಕೆ ಹೀಗಾದದ್ದು, ನೀನು ನಿಲ್ಲಿಸುತ್ತಲೇ ಇಲ್ಲವಲ್ಲ'

'ಒಮ್ಮೆ ಅಲ್ಲ ಹಲವು ಬಾರಿ' ಎಂದು ಅವಳ ಮೇಲೆ ಕೂಗಬೇಕೆನಿಸಿತು ಆದರೆ ತಡೆಹಿಡಿದುಕೊಂಡ. ಸೀರೆಯನ್ನು ದುರುಗುಟ್ಟಿ ನೋಡಿದ. ತಂದಾಗಿನಿಂದ ಒಗೆದದ್ದು ಎಂದು ಹೇಳುವುದೇ ಅಸಾಧ್ಯವಾಗಿತ್ತು. ಕೊಳೆಯಾದ ಬಟ್ಟೆಗಳಿಂದ ವಾಸನೆ ಬಂದೇಬರುತ್ತದೆ. ಎಳೆವೆಯಿಂದ ವಾತ್ಸಲ್ಯದಿಂದ ಬೆಳೆಸಿದ ಅಮ್ಮನ ಸ್ವರೂಪ ಅಸಹ್ಯ ಹುಟ್ಟಿಸುತ್ತಿತ್ತು, ವರ್ತನೆ ಅನಾಗರಿಕವಾಗಿತ್ತು.

ಮುಖ ಗಂಟುಹಾಕಿಕೊಂಡು ಅಮ್ಮ ಹೊರನಡೆದಳು. ತಾನು ಊಹಿಸದ ಮಗ್ಗುಲಿನಿಂದ ಅವಳಿಗೆ ಬಲವಾದ ಹೊಡೆತ ಬಿದ್ದಿತ್ತು. ಮಗ ಎಂದೂ ಹೀಗೆ ವರ್ತಿಸಿರಲಿಲ್ಲ. ಇದುವರೆಗೆ ಕುಟುಂಬದ ದಾರಿದ್ರ್ಯ ಅಗತ್ಯಗಳಲ್ಲಿ ಮುಳುಗಿ ಯಾವಾಗಲೂ ಹಿನ್ನೆಲೆಯಲ್ಲೇ ಇದ್ದ. ಅವನು ಮನೆಯಲ್ಲಿದ್ದಾನೆಂದು ಯಾರಿಗಾದರೂ ಹೇಳುವುದೇ ಕಹಿ ಅನಿಸುತ್ತಿತ್ತು. ಬಂಧುಗಳು ಮನೆಗೆ ಬಂದಾಗ ಯಾರೂ ಏನು ಕೇಳಬಾರದೆಂದು ಮಲಗಿದಂತೆ ನಟಿಸುತ್ತಿದ್ದ. ಅಂತಹ ಹುಡುಗ ಈಗ ತನ್ನ ಬೇಕು ಬೇಡಗಳನ್ನು ಒಪ್ಪಿಗೆ